

## ಖಾಸಗಿ ಶಾಲೆಯ 40 ಮಕ್ಕಳು!

‘ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗೂ ಒತ್ತು ನೀಡುತ್ತಿರುವುದರಿಂದ ಖಾಸಗಿ ಶಾಲೆಯ 40 ಮಕ್ಕಳು ನಮ್ಮ ಶಾಲೆಯಲ್ಲಿ ಪ್ರವೇಶ ಪಡೆದಿದ್ದಾರೆ’ ಎಂದು ಮುಖ್ಯ ಶಿಕ್ಷಕ ಝುರೆಪ್ಪ ಕಾಂಬಳೆ ಹೆಮ್ಮೆಯಿಂದ ಹೇಳುತ್ತಾರೆ.

‘ನಾಲ್ಕು ವರ್ಷಗಳ ಹಿಂದೆ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಕ್ಷೀಣಿಸಿತ್ತು. ಮೂಲಸೌಕರ್ಯ ಹೆಚ್ಚಿಸಿ ಬೋಧನೆಯಲ್ಲಿ ಹೊಸ ವಿಧಾನ ಅಳವಡಿಸಿದ ನಂತರ ವಿದ್ಯಾರ್ಥಿಗಳು ಬರಲಾರಂಭಿಸಿದರು. ಅಧಿಕಾರಿಗಳೂ ಬೆರಗುಗಣ್ಣಿನಿಂದ ನೋಡಲು ಆರಂಭಿಸಿದರು. ವಿಧಾನಸಭಾ ಚುನಾವಣೆಯಲ್ಲಿ ನಮ್ಮ ಶಾಲೆಯಲ್ಲೇ ಮಾದರಿ ಮತಗಟ್ಟೆಯನ್ನೂ ಸ್ಥಾಪನೆ ಮಾಡಲಾಗಿತ್ತು. ಜಿಲ್ಲಾ ಪಂಚಾಯಿತಿ ಸಿಇಒ ಆರ್.ಸೆಲ್ವಮಣಿ ಹಾಗೂ ಚುನಾವಣಾ ನೋಡೆಲ್ ಅಧಿಕಾರಿ ಗೌತಮ ಅರಳಿ ಶಾಲೆಗೆ ಗ್ರೀನ್ ಮ್ಯಾಟ್ ಕೊಡಿಸಿದ್ದಾರೆ’ ಎಂದು ತಿಳಿಸುತ್ತಾರೆ.

‘ಪ್ರಾಥಮಿಕ ಶಾಲೆಯಲ್ಲಿ 49 ಬಾಲಕಿಯರು ಹಾಗೂ 46 ಬಾಲಕರು ಸೇರಿ ಒಟ್ಟು 95 ವಿದ್ಯಾರ್ಥಿಗಳು ಇದ್ದಾರೆ. ವಿದ್ಯಾರ್ಥಿಗಳ ಫಲಿತಾಂಶದ ಪ್ರಮಾಣ ಶೇಕಡ 90ರಷ್ಟು ಇದೆ. ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಹಾಗೂ ಆದರ್ಶ ವಿದ್ಯಾಲಯಕ್ಕೆ ಫತೇಪುರ ಸರ್ಕಾರಿ ಪ್ರಾಥಮಿಕ ಶಾಲೆಯ 12 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ಎಸ್‌ಡಿಎಂಸಿ ಸಹಕಾರದೊಂದಿಗೆ ಎರಡು ವರ್ಷಗಳಲ್ಲಿ ಶಾಲೆಯ ಚಿತ್ರಣ ಬದಲಾಯಿಸಿದ್ದೇವೆ’ ಎಂದು ಹೇಳುವಾಗ ಕಾಂಬಳೆ ಅವರ ಮುಖ ಸಂತಸದಿಂದ ಅರಳುತ್ತದೆ.

ಕರ್ನಾಟಕ–ತೆಲಂಗಾಣ ಗಡಿಯಿಂದ ಆರು ಕಿ.ಮೀ ಅಂತರದಲ್ಲಿರುವ ಬೀದರ್ ತಾಲ್ಲೂಕಿನ ಫತೇಪುರ ಗ್ರಾಮವು ಸಂತ ಅಮಿರ್ ಫಕ್ರುಲ್ ಮುಲ್ಕ್ ಗಿಲಾನಿ ಸಮಾಧಿಯಿಂದಾಗಿಯೇ ಖ್ಯಾತಿ ಪಡೆದಿದೆ. ಅದರ ಜತೆಗೆ ಇಂದು ಮಾದರಿ ಶಾಲೆಯಿಂದಾಗಿ ಗಡಿ ಗ್ರಾಮಗಳಲ್ಲಿ ಮನೆ ಮಾತಾಗಿದೆ.

ಉರ್ದು, ತೆಲುಗು ಹಾಗೂ ಮರಾಠಿ ಪ್ರಭಾವದ ಮಧ್ಯೆ ಗಡಿ ಗ್ರಾಮಗಳಲ್ಲಿ ಕನ್ನಡ ತನ್ನ ಪರಿಶುದ್ಧತೆಯನ್ನೇ ಕಳೆದುಕೊಂಡಿದೆ. ಹಣ ಗಳಿಕೆಗಾಗಿ ಅಲ್ಲಲ್ಲಿ ಖಾಸಗಿ ಶಾಲೆಗಳು ತೆರೆದುಕೊಂಡಿವೆ. ಮೂಲ ಸೌಕರ್ಯಗಳ ಕೊರತೆಯಿಂದ ಕನ್ನಡ ಮಾಧ್ಯಮ ಸರ್ಕಾರಿ ಶಾಲೆಗಳು ನಲುಗಿವೆ. ಇಂಥ ಪರಿಸ್ಥಿತಿಯ ನಡುವೆಯೂ ಇಲ್ಲಿಯ ಶಾಲೆಯೊಂದರ ಮುಖ್ಯ ಶಿಕ್ಷಕ ಹಾಗೂ ಎಸ್‌ಡಿಎಂಸಿ ಅಧ್ಯಕ್ಷ ಸೇರಿ ತಮ್ಮ ಶಾಲೆಗೆ ಹೈಟೆಕ್ ಸ್ಪರ್ಶ ನೀಡಿದ್ದಾರೆ. 1960ರಲ್ಲಿ ಆರಂಭವಾಗಿರುವ ಈ ಸರ್ಕಾರಿ ಪ್ರಾಥಮಿಕ ಶಾಲೆಗೆ ಖಾಸಗಿ ಶಾಲೆಯ ವಿದ್ಯಾರ್ಥಿಗಳೂ ಬರುವಂತೆ ಮಾಡಿದ್ದಾರೆ.

ರಿಲಯನ್ಸ್ ಫೌಂಡೇಷನ್ 2014ರಲ್ಲಿ ಅನಕ್ಷರಸ್ಥರಿಗೆ ಅಕ್ಷರ ಬೋಧನೆ ಮಾಡುವ ಉದ್ದೇಶದಿಂದ ರಾತ್ರಿ ಪಾಠ ಶಾಲೆಗಾಗಿ ಗ್ರಾಮಕ್ಕೆ ಪ್ರಾಜೆಕ್ಟರ್ ನೀಡಿತ್ತು. ಸ್ವಲ್ಪ ದಿನ ಉಪಯೋಗಿಸಿದ ನಂತರ ಗ್ರಾಮದ ಪ್ರಮುಖರೊಬ್ಬರ ಮನೆಯಲ್ಲಿ ಅದನ್ನು ಇಡಲಾಗಿತ್ತು. ಎಸ್‌ಡಿಎಂಸಿ ಅಧ್ಯಕ್ಷ ಪ್ರಭು ಸಂತಪುರೆ ಗ್ರಾಮಸ್ಥರ ಮನವೊಲಿಸಿ ಎರಡು ವರ್ಷಗಳ ಹಿಂದೆ ಪ್ರಾಜೆಕ್ಟರ್ ತಂದು ಶಾಲೆಯಲ್ಲಿ ಅಳವಡಿಸಿದರು. ಇದರಿಂದ ವಿದ್ಯಾರ್ಥಿಗಳು ಪುಳಕಿತರಾದರು.

ಈ ಪ್ರಾಜೆಕ್ಟರ್‌ಗೆ ಬ್ಲೂ ಟೂತ್ ಹಾಗೂ ವೈ ಫೈ ವ್ಯವಸ್ಥೆಯೂ ಇದೆ. ಶಾಲೆಯ ಶಿಕ್ಷಕರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅಂತರ್ಜಾಲದಲ್ಲಿ ಪಠ್ಯಕ್ಕೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸಿ ಪ್ರಾಜೆಕ್ಟರ್‌ಗೆ ಜೋಡಿಸಿ ಮಕ್ಕಳಿಗೆ ಬೋಧನೆ ಮಾಡಿದರು. ಇದರಿಂದ ಮಕ್ಕಳಲ್ಲಿನ ಕಲಿಕಾ ಆಸಕ್ತಿ ಹೆಚ್ಚುತ್ತ ಹೋಯಿತು.

ಶಾಲೆಯ ಮೇಲೆ ಸೋಲಾರ್ ಪ್ಯಾನಲ್ ಅಳವಡಿಸಿರುವುದರಿಂದ ಇಲ್ಲಿ ವಿದ್ಯುತ್ ಸಮಸ್ಯೆ ಇಲ್ಲ. ಗಡಿ ಗ್ರಾಮಗಳಲ್ಲಿ ಮರಾಠಿ, ತೆಲುಗು, ಉರ್ದು ಮಿಶ್ರಿತ ಬಿದರಿ ಕನ್ನಡ ಇದೆ. ಪ್ರಾಜೆಕ್ಟರ್ ಮೂಲಕ ಬೋಧನೆ ಮಾಡುತ್ತಿರುವ ಕಾರಣ ಮಕ್ಕಳು ಶುದ್ಧ ಕನ್ನಡ ಅರಿತುಕೊಳ್ಳಲು ಸಾಧ್ಯವಾಗಿದೆ. ಅಂದ ಹಾಗೆ ಈ ಶಾಲೆಯಲ್ಲಿ ಕೃಷಿ ಕಾರ್ಮಿಕರ ಮಕ್ಕಳೇ ಅಧಿಕ ಸಂಖ್ಯೆಯಲ್ಲಿದ್ದಾರೆ.

ಶಿಕ್ಷಕರು, ವಿದ್ಯಾರ್ಥಿಗಳ ನೆರವಿನೊಂದಿಗೆ ಶಾಲೆಯ ಆವರಣದಲ್ಲಿ ಚಿಕ್ಕದಾದ ಉದ್ಯಾನ ನಿರ್ಮಿಸಿದರು. ಕೊಳವೆ ಬಾವಿ ಇರುವ ಕಾರಣ ನೀರಿನ ಸಮಸ್ಯೆಯಾಗಲಿಲ್ಲ. ಅಲಂಕಾರಿಕ ಸಸಿಗಳಿಂದಾಗಿ ಶಾಲೆಗೆ ಇನ್ನಷ್ಟು ಕಳೆ ಬಂದಿತು. ಶಿಕ್ಷಕರ ಆಸಕ್ತಿಯನ್ನು ಮನಗಂಡು ಚಿಮಕೋಡ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನಾಗಗೊಂಡ ಕಂಟೆಪ್ಪ ಅವರು ನರೇಗಾ ಯೋಜನೆಯಲ್ಲಿ ಶಾಲಾ ಆವರಣ ಗೋಡೆ ಹಾಗೂ ಮೈದಾನ ನಿರ್ಮಿಸಿಕೊಟ್ಟರು.

ಶಿಕ್ಷಕರು ಇನ್ನೂ ಒಂದು ಹೆಜ್ಜೆ ಮುಂದೆ ಇಟ್ಟು ಶಾಲಾ ಆವರಣದಲ್ಲಿ ತರಕಾರಿ ಗಿಡಗಳನ್ನು ಬೆಳೆಸಿದರು. ಇಲ್ಲಿ ಬೆಳೆದ ತರಕಾರಿಯನ್ನು ಮಧ್ಯಾಹ್ನದ ಬಿಸಿಯೂಟಕ್ಕೆ ಬಳಸಲು ಆರಂಭಿಸಿದರು. ಮೈದಾನದ ಅಂಚಿನಲ್ಲಿ ಅನೇಕ ಬಗೆಯ ಮರಗಳನ್ನು ಬೆಳೆಸಿದರು. ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಶಾಲೆಗೆ ಭೇಟಿ ಕೊಟ್ಟು ಪರಿಸರ ಪ್ರಜ್ಞೆಗೆ ಮೆಚ್ಚುಗೆ ವ್ಯಕ್ತಪಡಿಸಿ ಸತತ ಎರಡು ವರ್ಷ ತಲಾ 5 ಸಾವಿರ ರೂಪಾಯಿ ನಗದು ಬಹುಮಾನ ನೀಡಿದರು.

ಈ ಹಣದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಪ್ರಭು ಸಂತಪುರೆ ಅವರು ಪ್ರತಿಯೊಂದು ಕೊಠಡಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿ ಫ್ಯಾನ್‌ಗಳನ್ನು ಅಳವಡಿಸಿದರು. ಮಕ್ಕಳಿಗೆ ಸಮಯಕ್ಕೆ ಸರಿಯಾಗಿ ಶೂ, ಸಮವಸ್ತ್ರ, ಪಠ್ಯಪುಸ್ತಕ, ಬೆಲ್ಟ್ ಹಾಗೂ ಗುರುತಿನ ಚೀಟಿಯನ್ನೂ ವಿತರಣೆ ಮಾಡಿದರು. ಖಾಸಗಿ ಶಾಲೆಗೆ ಪೈಪೋಟಿ ನೀಡುವಷ್ಟು ಪ್ರಗತಿ ಸಾಧಿಸಿದ್ದರಿಂದ ಶಾಲೆಗೆ ಬರುವ ಮಕ್ಕಳ ಸಂಖ್ಯೆಯಲ್ಲೂ ಈಗ ಏರಿಕೆಯಾಗಿದೆ.

ಶಾಲಾ ಆವರಣದಲ್ಲಿ ಪ್ರತ್ಯೇಕ ಅಡುಗೆ ಕೋಣೆ ಇದೆ. ಇನ್ನೊಂದು ಬದಿಯಲ್ಲಿ ಶೌಚಾಲಯ ನಿರ್ಮಿಸಲಾಗಿದೆ. ಶಾಲೆಗೆ ಗ್ರಾಮ ಪಂಚಾಯಿತಿಯವರೇ 14ನೇ ಹಣಕಾಸು ಯೋಜನೆಯಲ್ಲಿ ಗೇಟ್ ನಿರ್ಮಿಸಿಕೊಟ್ಟಿದ್ದಾರೆ. ನಮ್ಮ ಮಕ್ಕಳ ಶಾಲೆ ಎನ್ನುವ ಅಭಿಮಾನದಿಂದ ಗ್ರಾಮಸ್ಥರೇ ಶಾಲೆಯ ಕಾವಲು ಮಾಡುತ್ತಿದ್ದಾರೆ. ಯಾವುದೇ ಹಳ್ಳಿಯ ಕನ್ನಡಿಗರು ಮನಸ್ಸು ಮಾಡಿದರೆ ಈ ಶಾಲೆಯಂತೆಯೇ ತಮ್ಮ ಊರಿನ ಸರ್ಕಾರಿ ಶಾಲೆಗಳನ್ನೂ ಹೀಗೆಯೇ ಅಭಿವೃದ್ಧಿ ಮಾಡಬಹುದಲ್ಲವೆ?